ಶ್ವಾಸಮಾರ್ಗಗಳು ಸಂಕುಚಿತಗೊಳ್ಳುವ, ಊದಿಕೊಳ್ಳುವ ಮತ್ತು ಮ್ಯೂಕಸ್ ಅಧಿಕವಾಗಿ ಉತ್ಪನ್ನಗೊಳ್ಳುವ ಒಂದು ಸ್ಥಿತಿಗೆ ಅಸ್ತಮಾ ಎನ್ನಲಾಗುತ್ತದೆ. ಇದರಿಂದಾಗಿ ಉಸಿರಾಟದಲ್ಲಿ ತೊಂದರೆ ಉಂಟಾಗುತ್ತದೆ, ದೈನಂದಿನ ಚಟುವಟಿಕೆಗಳಲ್ಲಿ ಸಮಸ್ಯೆ ಎದುರಾಗುತ್ತದೆ ಮತ್ತು ಪ್ರಾಣಕ್ಕೆ ಅಪಾಯಕಾರಿಯಾಗಿ ಪರಿಣಮಿಸುತ್ತದೆ.

ಒಂದು ಅಲರ್ಜಿಕ್ ಸ್ಪಂದನೆಯು, ಪದಾರ್ಥವೊಂದಕ್ಕೆ ಪ್ರತಿಯಾಗಿ ಪ್ರತಿಕ್ರಿಯಿಸುವ ಒಂದು ತೀವ್ರತರ ರೋಗನಿರೋಧಕ ಪ್ರತಿಕ್ರಿಯೆಯಾಗಿರುತ್ತದೆ. ಇದು ಸಾಮಾನ್ಯವಾಗಿ ಹಾನಿಕರವಾಗಿರುವುದಿಲ್ಲ ಅಥವಾ ಪ್ರತಿಯೊಬ್ಬರಲ್ಲೂ ರೋಗನಿರೋಧಕ ಸ್ಪಂದನೆಗೆ ಕಾರಣವಾಗಲಿಕ್ಕಿಲ್ಲ. ಒಂದು ಅಲರ್ಜಿಕ್ ಸ್ಪಂದನೆಯು, ತುರಿಕೆ ಅಥವಾ ಊತ ಅಥವಾ ಜೀವಕೋಶಗಳ ಹಾನಿಯಂತಹ ಲಕ್ಷಣಗಳಿಗೆ ಕಾರಣವಾಗುತ್ತದೆ.



# ಅಸ್ತಮಾ & ಅಲರ್ಜಿ ಸಮಸ್ಯೆಗಳ ಬಳಲಿಕೆಯಿಂದ ಮುಕ್ತಿ ಪಡೆಯಿರಿ

## ಕಾರಣಗಳು

- ಗಾಳಿಯಲ್ಲಿ ಬೆರೆತಿರುವ ಪರಾಗ, ಧೂಳು, ಬೂಷ್ಟ್, ಸಾಕುಪ್ರಾಣಿಗಳ ಡ್ಯಾಂಡರ್ ಅಥವಾ ಜಿರಳೆ ತ್ಯಾಜ್ಯ ಕಣಗಳು.
- ಸಾಮಾನ್ಯ ಶೀತದಂತಹ ಶ್ವಾಸೋಚ್ಛ್ವಾಸದ ಸೋಂಕುಗಳು.
- ದೈಹಿಕ ಚಟುವಟಿಕೆ (ಅಸ್ತಮಾ ಪ್ರೇರಿತ-ವ್ಯಾಯಾಮ).
- ಶೀತಗಾಳಿ.
- ಹೊಗೆಯಂತಹ ವಾಯು ಮಾಲಿನ್ಯಕಾರಕಗಳು ಮತ್ತು ಉಪದ್ರವಕಾರಿಗಳು.
- ಬೇಟಾಬ್ಲಾಕರ್ಸ್, ಆಸ್ಪಿರಿನ್, ಐಬುಪ್ರೊಫೇನ್ (ಅಡ್ವಿಲ್,ಮಾರ್ಟಿನ್ ಐಬಿ, ಇನ್ನಿತರೆ) ಮತ್ತು ನಾಪ್ರೊಕ್ಸೆನ್(ಅಲೀವ್) ಸೇರಿದಂತೆ ನಿರ್ದಿಷ್ಟ ಔಷಧೋಪಚಾರಗಳು
- ತೀವ್ರತರನಾದ ಭಾವನೆಗಳು ಮತ್ತು ಒತ್ತಡ.
- ಗ್ಯಾಸ್ಟ್ರೋಈಸೋಫಾಗೀಲ್ ರಿಫ್ಲಕ್ಸ್ ಡಿಸೀಸ್ (ಜಿಇಆರ್‌ಡಿ) ನಂತಹ ಒಂದು ಸ್ಥಿತಿಯಲ್ಲಿ, ಉದರದೊಳಗಿನ ಆಮ್ಲಗಳು ನಿಮ್ಮ ಗಂಟಲಿಗೆ ಏರುವುದು.

## ಚಿಹ್ನೆ ಮತ್ತು ರೋಗಲಕ್ಷಣಗಳು

- ಕೆಮ್ಮುವಿಕೆ
- ಉಸಿರಾಟದ ಕೊರತೆ
- ಉಬ್ಬಸ
- ಉಸಿರು ಒಳಗೆ ತೆಗದುಕೊಳ್ಳುವಾಗ ಸಿಳ್ಳೆ ಸದ್ದು ಉಂಟಾಗುವುದು – ಇದು ಸಾಮಾನ್ಯವಾಗಿ ಮಕ್ಕಳಲ್ಲಿ ಅಸ್ತಮಾ ಗೋಚರಿಸುವ ಲಕ್ಷಣವಾಗಿದೆ.

## ಆತಂಕದ ಅಂಶಗಳು

- ಅಟೊಪಿಕ್ ಡರ್ಮಾಟೈಟಿಸ್
- ಅಸ್ತಮಾ ಹಿನ್ನೆಲೆಯುಳ್ಳ ಕುಟುಂಬದ ಸದಸ್ಯರ ರಕ್ತ ಸಂಬಂಧಿಗಳು
- ಅಧಿಕ ತೂಕ

## ಸಂಕೀರ್ಣತೆಗಳು

ಗಂಭೀರವಾದ ಅಸ್ತಮಾ ಸಮಸ್ಯೆಯನ್ನು ತಟಸ್ಥಗೊಳಿಸಲೆಂದು ದೀರ್ಘಕಾಲದಿಂದ ಪಡೆಯುತ್ತಿರುವ ಔಷಧೋಪಚಾರದ ಅಡ್ಡಪರಿಣಾಮಗಳು.

## ಕಾರಣಗಳು

- ಒಣಹಣ್ಣು, ಮೊಟ್ಟೆ, ಹಾಲು, ಗ್ಲೂಟೆನ್, ಹಣ್ಣು ಮತ್ತು ತರಕಾರಿಗಳಂತಹ ಅಹಾರ ಪದಾರ್ಥಗಳೇ ಪ್ರತಿಕ್ರಿಯೆಗೆ ಸಾಮಾನ್ಯ ಕಾರಣವಾಗಿರುತ್ತವೆ.
- ನೊಣಗಳು ಅಥವಾ ಕಣಜಗಳಂತಹ ಕೀಟಗಳ ಕಚ್ಚುವಿಕೆ (ಕೆಲವೊಮ್ಮೆ ಬಹು ಗಂಭೀರ ಪ್ರತಿಕ್ರಿಯೆಗಳು ಗೋಚರಿಸುತ್ತವೆ).
- ಸಾಮಾನ್ಯವಾಗಿ ಪರಿಸರದಲ್ಲಿನ ಅಂಶಗಳಾದ ಪರಾಗ, ಧೂಳು, ಬೂಷ್ಟ್, ಗರಿಕೆಯಂತಹ ಸಸಿಗಳು ಅಥವಾ ಮರ, ಅನಿಮಲ್ ಡ್ಯಾಂಡರ್; ಔಷಧೋಪಚಾರಗಳು ಅಥವಾ ರಸಾಯನಿಕಗಳು.
- ಹೊರಗಿನ ಶೀತ ಅಥವಾ ಬಿಸಿ ತಾಪಮಾನಗಳಿಗೆ, ಆಭರಣಗಳಿಗೆ ಅಥವಾ ಸೂರ್ಯನ ಬಿಸಿಲಿಗೆ ಅಲರ್ಜಿಕ್ ಪ್ರತಿಕ್ರಿಯೆಗಳು ಗೋಚರಿಸುವುದು.

## ರೋಗಲಕ್ಷಣಗಳು

- ತುರಿಕೆ, ಊದಿಕೊಳ್ಳುವಿಕೆ, ಮೂಗು ಸೋರುವಿಕೆ, ಕಣ್ಣಲ್ಲಿ ನೀರು ತುಂಬುವುದು, ಕೆಮ್ಮುವಿಕೆ, ಉಬ್ಬಸ, ಮ್ಯೂಕಸ್ ಹೆಚ್ಚಳವಾಗುವುದು ಇದರ ಲಕ್ಷಣಗಳಾಗಿವೆ. ಈ ಅಲರ್ಜಿಕ್ ಪ್ರತಿಕ್ರಿಯೆಗಳು ವ್ಯಕ್ತಿಯಿಂದ ವ್ಯಕ್ತಿಗೆ ವಿಭಿನ್ನವಾಗಿರುತ್ತವೆ.
- ಲ್ಯಾಟೆಕ್ಸ್‌ನಂತಹ ಪದಾರ್ಥಗಳು ತ್ವಚೆಗೆ ತಾಗಿದಾಗ ಕೂಡ ಅಲರ್ಜಿಕ್ ಪ್ರತಿಕ್ರಿಯೆಗಳು ಗೋಚರಿಸುತ್ತವೆ. ಇಂತಹವನ್ನು ಕಾಂಟಾಕ್ಟ್ ಡರ್ಮಾಟೈಟಿಸ್ ಅಥವಾ ಎಕ್ಜಿಮಾ ಎನ್ನಲಾಗುತ್ತದೆ. ಚರ್ಮದ ಅಲರ್ಜಿಗಳು ಸಾಮಾನ್ಯವಾಗಿ ಕಲೆಗಳು ಅಥವಾ ಊತ ಅಥವಾ ಚರ್ಮದೊಳಗೆ ಊದಿಕೊಳ್ಳುವ ರೂಪದಲ್ಲಿ ಕಾಣಿಸುತ್ತವೆ. ಇವನ್ನು ಹೈವ್ಸ್ ಮತ್ತು ಆಂಜಿಯೋಎಡಿಮಾ ಗುಣಲಕ್ಷಣಗಳನ್ನು ಹೊಂದಿರುವ "ವ್ಹಿಯಲ್ ಅಂಡ್ ಫ್ಲೇರ್" ಎನ್ನಲಾಗುತ್ತದೆ.
- ಕೀಟಗಳು ಕಚ್ಚಿದಾಗ, ಕಚ್ಚಿದ ಭಾಗದಲ್ಲಿ ದೊಡ್ಡದಾಗಿ ಸ್ಥಾನಿಕ ಪ್ರತಿಕ್ರಿಯೆ ಕಂಡುಬರುತ್ತದೆ (ಸುಮಾರು 10 ಸೆಂ.ಮೀ.ಗೂ ಅಧಿಕ ಗಾತ್ರದಲ್ಲಿ ಚರ್ಮವು ಕೆಂಪಗಾಗುವುದು). ಇದು ಒಂದು ಅಥವಾ ಎರಡು ದಿನಗಳವರೆಗೂ ಅಸ್ತಿತ್ವದಲ್ಲಿರುತ್ತದೆ. ಈ ಪ್ರತಿಕ್ರಿಯೆಯು, ಇಮ್ಯೂನೋಥೆರಪಿಯ ಬಳಿಕ ಕೂಡ ಗೋಚರಿಸಬಹುದಾಗಿರುತ್ತದೆ.

## ಪಾಸಿಟಿವ್ ಹೋಮಿಯೋಪತಿಕ್ ಚಿಕಿತ್ಸೆ

ಅಸ್ತಮಾ ಹಾಗೂ ಅಲರ್ಜಿಕ್ ಸಮಸ್ಯೆಗಳ ನಿವಾರಣೆಗೆ ಪಾಸಿಟಿವ್ ಹೋಮಿಯೋಪತಿಯು ತನ್ನ ಕಾನ್‌ಸ್ಟಿಟ್ಯೂಷನಲ್ ಚಿಕಿತ್ಸಾ ವಿಧಾನವನ್ನು ಅನುಸರಿಸುತ್ತದೆ. ಈ ವಿಧಾನದಲ್ಲಿ ರೋಗಿಯು ಒಂದು ಪ್ರಶ್ನಾವಳಿಗೆ ತಮ್ಮ ಉತ್ತರಗಳನ್ನು ನೀಡುತ್ತಾರೆ ಮತ್ತು ಇದರ ಆಧಾರದ ಮೇರೆಗೆ ಪ್ರಕರಣವನ್ನು ವಿಶ್ಲೇಷಿಸಿ, ಮೌಲ್ಯಮಾಪನ ಮಾಡಿ, ಸಮರ್ಪಕ ಕಾನ್‌ಸ್ಟಿಟ್ಯೂಷನಲ್ ಚಿಕಿತ್ಸೆಗಳನ್ನು ಆಯ್ಕೆ ಮಾಡಲಾಗುತ್ತದೆ. ರೋಗಗ್ರಸ್ಥ ಮನುಷ್ಯನಿಗೆ ಚಿಕಿತ್ಸೆ ನೀಡಬೇಕೆ ಹೊರತು ಮನುಷ್ಯನಲ್ಲಿ ಅಡಗಿರುವ ರೋಗಕ್ಕಲ್ಲ ಎಂಬುದೇ ಹೋಮಿಯೋಪತಿಯ ನಂಬಿಕೆಯಾಗಿದೆ. ಈ ಅಸ್ತಮಾ ಹಾಗೂ ಅಲರ್ಜಿಕ್ ಅಸ್ವಸ್ಥತೆಗಳು ಬಹುತೇಕವಾಗಿ ಅನುವಂಶಿಕ ಫಲಿತಾಂಶಗಳ ಮತ್ತು ನೈಸರ್ಗಿಕ ಅಂಶಗಳ ಬಳುವಳಿಗಳಾಗಿರುತ್ತವೆ. ಸಮರ್ಪಕ ಆರೋಗ್ಯ ಹೊಂದಲು ಪರಿಣಾಮಕಾರಿ ಹೋಮಿಯೋಪತಿಕ್ ಚಿಕಿತ್ಸೆ ನೀಡುವುದರ ಜೊತೆಗೆ, ಪಾಸಿಟಿವ್ ಹೋಮಿಯೋಪತಿಯು ಕೆಲವು ನಿರ್ವಹಣಾ ಮಾರ್ಗಸೂಚಿಗಳನ್ನು ಕೂಡ ಒದಗಿಸುತ್ತದೆ ಮತ್ತು ಇವುಗಳು ಆರೋಗ್ಯ ಪುನಶ್ಚೇತನಗೊಳಿಸುವಲ್ಲಿ ಸಹಕಾರಿಯಾಗಿವೆ.

**ಪಡೆಯಿರಿ 300/- ಸಮಾಲೋಚನೆ ಉಚಿತ ವೈದ್ಯರೊಂದಿಗೆ ಮಾತನಾಡಲು: 90360 60319**

An ISO 9001 - 2000 Certified ®

**Positive Homeopathy**

www:positivehomeopathy:com

ಇದು ಪಾಸಿಟಿವ್ ಹೋಮಿಯೋಪತಿ ಅಂಗ ಸಂಸ್ಥೆ

**Dr.Kiran's Homeo LIFE**

www:homeolife:in

**ಕರ್ನಾಟಕ:** ಮಲ್ಲೇಶ್ವರಂ ▪ ಕೋರಮಂಗಲ ▪ ರಾಜಾಜಿನಗರ ▪ ಇಂದಿರಾನಗರ ▪ ಜಯನಗರ ▪ ಹುಬ್ಬಳ್ಳಿ ▪ ಮಂಗಳೂರು ▪ ಬೆಳಗಾವಿ ▪ ದಾವಣಗೆರೆ ▪ ಗುಲ್ಬರ್ಗ ▪ ಮೈಸೂರು | ಆಂಧ್ರಪ್ರದೇಶ